ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 11-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **Press Conference:**<br><br>**Dr. H. Shivanna, Vice-Chancellor of the University of Agriculture and Sciences, Bangalore.**<br><br>**Note:**<br><br>**Vehicle arranged from Press Club, Cubbon Park at 11-30 AM.**<br><br>**Contact:**<br><br>**Dr. Madhuprasad,**<br>**Mob No. 9448586564**<br>**Mr. Ashoka,**<br>**Mob No. 9886690866** | **12-03-2015**<br>**Thursday**<br>**at**<br>**12-00 Noon** | **Office of the Vice-Chancellors, University of Agriculture, Naik Bhavan, GKVK, Bengaluru** |
| 2. | **UNEF-GET-MoEF-ABS** ಯೋಜನೆಯ ಉದ್ವಾಟನೆ:<br><br>ಉದ್ಘಾಟಕರು:<br><br>ಶ್ರೀ ರಮಾನಾಥ್ ರೈ,<br>ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು<br><br>ಮುಖ್ಯ ಅತಿಥಿಗಳು:<br><br>ಶ್ರೀ ಮದನ್ ಗೋಪಾಲ್,<br>ಅಪರ ಮುಖ್ಯ ಕಾರ್ಯದರ್ಶಿ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. | **12-03-2015** ಗುರುವಾರ<br>ಸಂಜೆ<br>6-30 ಗಂಟೆಗೆ | ಹೋಟೆಲ್ ವಿವಂತಾ ತಾಜ್, ಗೊರಗುಂಟೆ ಪಾಳ್ಯ ಆರ್.ಎನ್.ಎಸ್. ಮೋಟಾರ್ಸ್ ಹತ್ತಿರ, ಯಶವಂತಪುರ, ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## "ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ" ಗ್ರಂಥ ಬಿಡುಗಡೆ

**ಬೆಂಗಳೂರು, ಮಾರ್ಚ್ 11, (ಕರ್ನಾಟಕ ವಾರ್ತೆ)**

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ತನ್ನ ವಿಶೇಷ ಪ್ರಕಟಣೆಗಳಲ್ಲೊಂದಾದ 'ಎ ಹ್ಯಾಂಡ್ ಬುಕ್ ಆಫ್ ಕರ್ನಾಟಕ' ಗ್ರಂಥದ ಐದನೆಯ ಆವೃತ್ತಿಯನ್ನು ಇತ್ತೀಚೆಗೆ ಪ್ರಕಟಿಸಿದೆ. ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳೂ ಸೇರಿದಂತೆ ಜನಸಾಮಾನ್ಯರಿಗೂ ಉಪಯುಕ್ತವಾಗಿರುವ ಈ ಗ್ರಂಥದ ಬೆಲೆ ರೂ 650/–.

ಈ ಗ್ರಂಥವು ಸರ್ಕಾರಿ ಮುದ್ರಣಾಲಯದ ಬೆಂಗಳೂರು, ಮೈಸೂರು, ಧಾರವಾಡ ಹಾಗೂ ಕಲಬುರಗಿ ಕಚೇರಿಗಳು ಹಾಗೂ ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಎಂಟನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು ಕಚೇರಿಯಲ್ಲೂ ಮಾರಾಟಕ್ಕೆ ಲಭ್ಯವಿದೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ, ಗ್ಯಾಸೆಟಿಯರ್ ಇಲಾಖೆಯ ದೂರವಾಣಿ ಸಂಖ್ಯೆ 080 – 22213474 ಮೂಲಕ ಸಂಪರ್ಕಿಸಬಹುದಾಗಿದ್ದು, ಇಲಾಖೆಯ www.gazetteer.kar.nic.in ಅಂತರ್ಜಾಲಕ್ಕೆ ಭೇಟಿ ನೀಡಬಹುದು.
ಬಾಬು:ಜಿಪಿಆರ್.

## "A HAND BOOK OF KARNATAKA" BOOK RELEASED

Bengaluru, March 11, (Karnataka Information)

The Karnataka Gatteer Department has published the fifth edition of one of its Special Publications, "A Hand Book of Karnataka" in Multi-colour, priced Rs. 650/- useful to the candidates taking up Competitive Examinatons as well as general publics.

It is available Dharwad, Kalaburagi and Mysuru: and also in the Office of the Karnataka Gazetteer Department, 8th floor, BWSSB Building, Cauvery Bhavan, Bengaluru-560 009.

For any further clarifications people may contact the Karnataka Gazetteer Office through 080 – 22213474 and may also visit our website: www.gazetteer.kar.nic.in.
babu:gpr

# ಸಾಕ್ಷರ ಭಾರತ್ : ಕಲಿಕಾರ್ಥಿಗಳ ಮೌಲ್ಯ ಮಾಪನ ಪರೀಕ್ಷೆ

**ಬೆಂಗಳೂರು, ಮಾರ್ಚ್ 11, (ಕರ್ನಾಟಕ ವಾರ್ತೆ)**

ಸರ್ಕಾರದ ಪ್ರಧಾನ ಕಾರ್ಯಕ್ರಮಗಳಲ್ಲೊಂದಾದ ಮಹತ್ವಾಕಾಂಕ್ಷಿ ಸಾಕ್ಷರ ಭಾರತ್ ಕಾರ್ಯಕ್ರಮ ಕರ್ನಾಟಕದ ಬಾಗಲಕೋಟೆ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ವಿಜಯಪುರ, ಬೀದರ್, ಚಿತ್ರದುರ್ಗ, ಚಾಮರಾಜನಗರ, ಗದಗ, ಕಲಬುರಗಿ, ಹಾವೇರಿ, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು ಮತ್ತು ತುಮಕೂರು ಈ 17 ಜಿಲ್ಲೆಗಳಲ್ಲಿ ಅನುಷ್ಠಾನದಲ್ಲಿದೆ.

ಸಾಕ್ಷರ ಭರತ್ ಕಾರ್ಯಕ್ರಮ ಗ್ರಾಮೀಣ ಪ್ರದೇಶದ 15+ ವಯೋಮಾನದ ಎಲ್ಲಾ ಅನಕ್ಷರಸ್ಥರನ್ನು ವಿಶೇಷವಾಗಿ ಮಹಿಳೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮತ್ತು ಅಲ್ಪಸಂಖ್ಯಾತ ಅನಕ್ಷರಸ್ಥರನ್ನು ಆದ್ಯತೆ ಮೇರೆಗೆ ಸಾಕ್ಷರಸ್ಥರನ್ನಾಗಿಸುವ ಸಮಗ್ರ ಕಾರ್ಯಕ್ರಮವಾಗಿದೆ.

ಈ ಕಾರ್ಯಕ್ರಮದಡಿ ಅನೌಪಚಾರಿಕ ವ್ಯವಸ್ಥೆಯಲ್ಲಿ ನವಸಾಕ್ಷರರಾದವರ (ಓದು, ಬರಹ, ಲೆಕ್ಕಾಚಾರ ಕಲಿತವರು) ಕಲಿಕಾ ಗುಣಮಟ್ಟ ಪರೀಕ್ಷಿಸಿ, ಪ್ರಮಾಣ ಪತ್ರ ನೀಡುವ ವ್ಯವಸ್ಥೆಯ ಅಂಗವಾಗಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಪ್ರಾಧಿಕಾರ ಮತ್ತು ಎನ್.ಐ.ಒ.ಎಸ್. ನವರು ಮಾರ್ಚ್ ಮತ್ತು ಆಗಸ್ಟ್ ಮಾಹೆಯಲ್ಲಿ ಮೌಲ್ಯಮಾಪನ/ಪರೀಕ್ಷೆ ಕಾರ್ಯಕ್ರಮವನ್ನು ನಡೆಸುತ್ತಿದ್ದು ಪ್ರಸ್ತುತ ದಿನಾಂಕ 15-03-2015 ರಭಾನುವಾರದಂದು ಮೌಲ್ಯಮಾಪನ/ಪರೀಕ್ಷೆಗೆ ದಿನಾಂಕ ನಿಗದಿಯಗಿದ್ದು ರಾಜ್ಯದ ಸಾಕ್ಷರ ಭಾರತ್ ಕಾರ್ಯಕ್ರಮ ಅನುಷ್ಠಾನದಲ್ಲಿರುವ 17 ಜಿಲ್ಲೆಗಳ 104 ತಾಲ್ಲೂಕುಗಳ 3358 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಸುಮಾರು 6500 ಗ್ರಾಮ ಕೇಂದ್ರಗಳಲ್ಲಿ ಸುಮಾರು 8.00 ಲಕ್ಷ ಕಲಿಕಾರ್ಥಿಗಳಿಗೆ ಮೌಲ್ಯಮಾಪನ/ಪರೀಕ್ಷೆಗೆ ವ್ಯವಸ್ಥೆ ಮಾಡಲಾಗಿದೆ.

ಈ ಮೌಲ್ಯಮಾಪನ/ಪರೀಕ್ಷೆಯು 3 ಗಂಟೆಯ ಅವಧಿಯದಾಗಿದ್ದು ಬೆಳಿಗ್ಗೆ 10-00 ಗಂಟೆಯಿಂದ ಸಾಯಂಕಾಲ 5-00 ಗಂಟೆಯವರೆಗೆ ನಡೆಯಲಿದ್ದು ನವಸಾಕ್ಷರರು ಅವರಿಗೆ ಅನುಕೂಲವಾದ ಸಮಯದಲ್ಲಿ ಪರೀಕ್ಷಾ ಕೇಂದ್ರಕ್ಕೆ ಬಂದು ಪರೀಕ್ಷೆ ಬರೆಯಬಹುದಾಗಿದೆ. ಪರೀಕ್ಷೆ ಬರೆಯಲು ಆಸಕ್ತಿವುಳ್ಳವರು ದಿನಾಂಕ 14-3-2015 ರ ಒಳಗೆ ಗ್ರಾಮ ಲೋಕ ಶಿಕ್ಷಣ ಕೇಂದ್ರದ ಪ್ರೇರಕರನ್ನು ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದಾಗಿದೆ ಹಾಗೂ ಈ ಹಿಂದೆ ಪರೀಕ್ಷೆ ಬರೆದು ಅನುತ್ತೀರ್ಣರಾದವರೂ ಸಹ ನೋಂದಾಯಿಸಿಕೊಂಡು ಪರೀಕ್ಷೆ ಬರೆಯಲು ಅವಕಾಶವಿದೆ. ಆದುದರಿಂದ ಸಾಕ್ಷರ ಭಾರತ್ ಕಾರ್ಯಕ್ರಮದಡಿ ಕಲಿತು ಪರೀಕ್ಷೆ ಬರೆಯದೆ ವಂಚಿತರಾಗಿರುವ ಎಲ್ಲಾ ನವಸಾಕ್ಷರರೂ ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಪರೀಕ್ಷೆ ಬರೆದು ರಾಷ್ಟ್ರೀಯ ಪ್ರಮಾಣೀಕೃತ ಪ್ರಮಾಣ ಪತ್ರ ಪಡೆಯಲು ರಾಜ್ಯ ಸಾಕ್ಷರತಾ ಮಿಷನ್ ಕರೆ ನೀಡಿದೆ.

ಬಾಬು:ಜಿಪಿಆರ್.